ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1237
ಉತ್ತರಿಸಬೇಕಾದ ದಿನಾಂಕ	22.09.2021
ಸದಸ್ಯರ ಹೆಸರು	ಶ್ರೀ ಸುನೀಲಗೌಡ ಬಸನಗೌಡ ಪಾಟೀಲ
ಉತ್ತರಿಸುವ ಸಚಿವರು	ಮಾನ್ಯ ಕಂದಾಯ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	Urban Property Ownership Records (U.P.O.R) ಯೋಜನೆಯು ಪ್ರಸ್ತುತ ಯಾವ ಹಂತದಲ್ಲಿದೆ; ಸದರಿ ಯೋಜನೆಗೆ ಇಲ್ಲಿಯವರೆಗೆ ಖರ್ಚಾದ ಒಟ್ಟು ಹಣ ಎಷ್ಟು;	ಕರ್ನಾಟಕ ಸರ್ಕಾರವು ಮೈಸೂರು, ಶಿವಮೊಗ್ಗ, ಮತ್ತು ಮಂಗಳೂರು ನಗರಗಳಲ್ಲಿ ನಗರಾಸ್ತಿ ಮಾಲೀಕತ್ವದ ಹಕ್ಕು ದಾಖಲೆ ಯೋಜನೆ Urban Property Ownership Record (UPOR) ಯನ್ನು Public Private Partnership ಮಾದರಿಯಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದ್ದು, ಪ್ರಸ್ತುತ ಹಂತವು ಈ ಕೆಳಗಿನಂತಿದೆ. ➢ ಮೈಸೂರು ನಗರದಲ್ಲಿ 3,24,032 ಆಸ್ತಿಗಳನ್ನು ಸವಿಸ್ತಾರ ಅಳತೆ ಮಾಡಿ ನಕ್ಷೆ ಸಿದ್ಧಪಡಿಸಲಾಗಿದ್ದು, ಅದರಲ್ಲಿ 1,85,110 ಗಳಿಗೆ ಕರಡು ಪಿ.ಆರ್. ಕಾರ್ಡ್ ಸಿದ್ಧಪಡಿಸಲಾಗಿದೆ. ➢ ಶಿವಮೊಗ್ಗ ನಗರದಲ್ಲಿ 1,00,876 ಆಸ್ತಿಗಳನ್ನು ಸವಿಸ್ತಾರ ಅಳತೆ ಮಾಡಿ ನಕ್ಷೆ ಸಿದ್ಧಪಡಿಸಲಾಗಿದ್ದು, ಅದರಲ್ಲಿ 66,640 ಗಳಿಗೆ ಕರಡು ಪಿ.ಆರ್. ಕಾರ್ಡ್ ಸಿದ್ಧಪಡಿಸಲಾಗಿದೆ. ➢ ಮಂಗಳೂರು ನಗರದಲ್ಲಿ 1,59,000 ಆಸ್ತಿಗಳನ್ನು ಸವಿಸ್ತಾರ ಅಳತೆ ಮಾಡಿ ನಕ್ಷೆ ಸಿದ್ಧಪಡಿಸಲಾಗಿದ್ದು, ಅದರಲ್ಲಿ 70, 020 ಗಳಿಗೆ ಕರಡು ಪಿ.ಆರ್. ಕಾರ್ಡ್ ಸಿದ್ಧಪಡಿಸಲಾಗಿದೆ. ಸದರಿ ಯೋಜನೆಗೆ ಸನ್ 2009-2010ನೇ ಸಾಲಿನಿಂದ 2020-2021ನೇ ಸಾಲಿನವರೆಗಿನ ವೆಚ್ಚದ ಮಾಹಿತಿ ಈ ಕೆಳಗಿನಂತಿದೆ. ➢ 12 ವರ್ಷಗಳಲ್ಲಿ ಆಯವ್ಯಯದಲ್ಲಿ ರಾಜ್ಯ ಸರ್ಕಾರವು ಒಟ್ಟು ರೂ.55 ಕೋಟಿ ಅನುದಾನವನ್ನು ಮಂಜೂರು ಮಾಡಿರುತ್ತದೆ. ➢ 12 ವರ್ಷಗಳಲ್ಲಿ ರೂ.23.99 ಕೋಟಿ ಅನುದಾನವನ್ನು ಯೋಜನಾ ಅನುಷ್ಠಾನಕ್ಕೆ ಬಿಡುಗಡೆ ಮಾಡಿರುತ್ತದೆ. ➢ ಇಲಾಖೆಯು 12 ವರ್ಷಗಳಲ್ಲಿ ಅಗತ್ಯತೆಗನುಸಾರವಾಗಿ ರೂ.16.00 ಕೋಟಿ ಮಾತ್ರ ವೆಚ್ಚ ಮಾಡಿರುತ್ತದೆ. ➢ 12 ವರ್ಷಗಳಲ್ಲಿ ಉಳಿದ ರೂ.7.99 ಕೋಟಿ ಮೊತ್ತವನ್ನು ಕಾಲಾನುಕ್ರಮದಲ್ಲಿ ಸರ್ಕಾರಕ್ಕೆ ಮರು ಅಧ್ಯರ್ಪಣೆಯಾಗಿರುತ್ತದೆ.

ಆ	ಸದರಿ ಯೋಜನೆಯಲ್ಲಿ ನಡೆದ ಅವ್ಯವಹಾರವು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ಸದರಿ ಯೋಜನೆಗೆ ಸಂಬಂಧಪಟ್ಟಂತೆ ಸಂಪೂರ್ಣ ಮಾಹಿತಿಯನ್ನು ದಾಖಲೆಗಳೊಂದಿಗೆ ನೀಡುವುದು)	ಈ ಯೋಜನೆಯು ಪ್ರಾರಂಭವಾದಾಗಿನಿಂದ ಇದುವರೆಗೂ ಯಾವುದೇ ಅವ್ಯವಹಾರವು ನಡೆದಿರುವ ಬಗ್ಗೆ ಸರ್ಕಾರಕ್ಕೆ ಯಾವುದೇ ದೂರು ಸ್ವೀಕೃತಿ ಯಾಗಿರುವುದಿಲ್ಲ.

ಕಂಇ 167 ಎಂಆರ್‌ಆರ್ 2021

(ಆರ್. ಅಶೋಕ)
ಕಂದಾಯ ಸಚಿವರು